# ಕ್ರುಕೆಡ್ ರಸ್ತೆ!






ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೋ ನಗರ ಸುಂದರವಾದ ಬೆಟ್ಟಗಳ ಮೇಲೆ ವಿಶಾಲವಾಗಿ ಹರಡಿದೆ. ರಸ್ತೆಗಳೆಲ್ಲ ದಿಬ್ಬಗಳ ಮೇಲೆ ಏರಿ ಇಳಿಯುತ್ತವೆ. ಎಲ್ಲಿಯೂ ಸುರಂಗ ಮಾರ್ಗಗಳಿಲ್ಲ.

ಇಲ್ಲಿ ರಷ್ಯನ್ ಹಿಲ್ ಎಂಬ ಒಂದು ಬೆಟ್ಟವಿದೆ. ಇದರ ಮೇಲೇರಲು ತುಂಬ ಎತ್ತರಕ್ಕೆ ನೇರವಾಗಿ 'ಲಂಬಾರ್ಡ್ ಸ್ಟ್ರೀಟ್' ಎಂಬ ರಸ್ತೆ ಮೂಲಕ ಹೋಗಬೇಕು. ಇದು ಒನ್‌ವೇ. ಬೆಟ್ಟದಿಂದ ಕೆಳಗಿಳಿಯುವ ರಸ್ತೆ ಬೇರೆ ಇದೆ. ಇದೇ ಜಗದ್ವಿಖ್ಯಾತ ಕ್ರುಕೆಡ್ ರಸ್ತೆ. ಇದು ಕಡಿದಾದ ತಿರುವುಗಳನ್ನು ಒಳಗೊಂಡಿದೆ. ಅಂಕು ಡೊಂಕಾಗಿ ಕೆಳಗಿಳಿಯುವ ಕಾರಣ ಈ ಅನ್ವರ್ಥ ನಾಮ. ಪ್ರವಾಸಿಗರಿಗೆ ಆಕರ್ಷಣೀಯ ತಾಣ ಎನಿಸಿರುವ ಈ ರಸ್ತೆಯಲ್ಲಿ ವಾಹನ ಮೂಲಕ ಕೆಳಗಿಳಿಯುವುದು ಒಂದು ರೋಮಾಂಚಕಾರಿ ಅನುಭವ.

ಏಕಮುಖ ಸಂಚಾರದ ಈ ರಸ್ತೆ, ಸುಮಾರು ಅರ್ಧ ಕಿ.ಮೀ ಮಾತ್ರ ಉದ್ದವಿರುವುದು. ಇಲ್ಲಿ ಕಾರಿನ ವೇಗ ಗರಿಷ್ಠ ಮಿತಿ ಗಂಟೆಗೆ 8 ಕಿ.ಮೀ. ಇದು ನಿತ್ಯೋಪಯೋಗಿ ರಸ್ತೆಯೂ ಹೌದು; ಅದಕ್ಕಿಂತಲೂ ಹೆಚ್ಚಾಗಿ ಪ್ರವಾಸಿ ತಾಣ ಎನ್ನಲೂಬಹುದು.

■ ಸರಸ್ವತಿ ಶಂಕರ್

